ತೆಗೆದುಹಾಕಬೇಕು. ಇನ್ನು ರೈತ ಚಟುವಟಿಕೆಯಾದ ಎಣ್ಣೆ ಗಾಣದ ಮೇಲೆ ಹಾಲಿ ವಿಧಿಸಿರುವಂತಹ ತೆರಿಗೆಯನ್ನು ತೆಗೆದುಹಾಕಬೇಕು. ಈ ಕುಸುಬೆ ಎಣ್ಣೆ, ಗಾಣಗಳಿಂದ ತೆಗೆಯುವಂತಹ ಎಣ್ಣೆಗಳಿಗೂ ಇವತ್ತು ಇರುವ ತೆರಿಗೆಯನ್ನು ತೆಗೆದುಹಾಕಬೇಕು, ಮತ್ತೆ ಹನಿ ನೀರಾವರಿಗೆ ಉಪಯೋಗಿಸುವಂತಹ ಮೈಕ್ರೊ ಟ್ಯೂಬ್‌ಗಳು ಏನು ಇವೆ, ಇದಕ್ಕೆ ಶೇ. 12.5 ರಷ್ಟು ತೆರಿಗೆಯನ್ನು ನೀವು ಹಾಕುತ್ತಿದ್ದೀರಿ. ಮಹಾರಾಷ್ಟ್ರ, ತಮಿಳುನಾಡಿನಲ್ಲಿ, ಆಂಧ್ರಪ್ರದೇಶಗಳಲ್ಲಿ ಈ ತೆರಿಗೆ ಇಲ್ಲ. ಆದುದರಿಂದ ದಯಮಾಡಿ ಈ ಎಲ್ಲಾ ತೆರಿಗೆಗಳನ್ನು ತೆಗೆದುಹಾಕಿ, ರೈತರು ನೆಮ್ಮದಿಯಾಗಿ ಬದುಕುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ನಾನು ಈ ಬಜೆಟ್ ಬಗ್ಗೆ ಚರ್ಚೆ ಮಾಡುವಂಥ ಕಾಲದಲ್ಲಿ ಭಾಗವಹಿಸದೇ ಇದ್ದರೂ, ಈಗಾಗಲೇ ರಿಪ್ಲೈ ಪ್ರಾರಂಭವಾಗಿದೆ. ಆದುದರಿಂದ ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ, 8–10 ನಿಮಿಷಗಳ ಸಮಯವನ್ನು ಮಾತ್ರ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇ. ಮಾನ್ಯ ಮಂತ್ರಿಯವರು ಉತ್ತರ ಕೊಡುವಂತಹ ಸಂದರ್ಭದಲ್ಲಿ, ನಮ್ಮದು ಒಂದೇ ಒಂದು ವಿನಂತಿ ಏನೆಂದರೆ, ನಾವು ಈ ಕಡೆಯಿಂದ ಏನು ಮಾತನಾಡಿದ್ದೇವೆ, ಅದಕ್ಕೆ ನೀವು ಏನು ಮಾಡುತ್ತೀರಾ, ಅದರ ಬಗ್ಗೆ 1,2,3 ಎಂದು ತಾವು ರಿಪ್ಲೈ ಮಾಡುವಂತಹ ಸಂದರ್ಭದಲ್ಲಿ ನಮಗೆ ಸ್ಪಷ್ಟೀಕರಣವನ್ನು ಕೊಟ್ಟು, ಈ ಕಡೆಯಿಂದ ಮಾತನಾಡಿದಂತಹ ವಿಯಷಗಳಿಗೆ ಉತ್ತರವನ್ನು ಕೊಟ್ಟು, ಒಂದು ಒಳ್ಳೆಯ ರೀತಿಯ ಮೆಸೇಜ್ ಈ ರಾಜ್ಯದ ಜನತೆಗೆ ಹೋಗುವ ರೀತಿಯಲ್ಲಿ ತಾವು ಗಮನವನ್ನು ಕೊಡಬೇಕು, ಎನ್ನುವಂಥ ಒತ್ತಾಯವನ್ನು ಮಾತ್ರ ಈ ಸಂದರ್ಭದಲ್ಲಿ ಮಾಡುತ್ತೇನೆ. ನಾನು ಈಗಾಗಲೇ ಹೇಳಿದ್ದೆ. ಬಾಗಲಕೋಟೆ ತಾಲ್ಲೂಕಿನ ಬೊಮ್ಮಣಗಿ, ಹುನಗುಂದ ತಾಲ್ಲೂಕಿನ ತುರಡಗಿ, ಈ ಭಾಗಗಳಲ್ಲಿ ನಾರಾಯಣಪುರ ಅಣೆಕಟ್ಟಿನಿಂದ ಹಿನ್ನೀರು ನುಗ್ಗಿದೆ ಮತ್ತು ಊರಿನಲ್ಲಿ ಅನಾಹುತಗಳು ಆಗಿವೆ, ಈ ರೀತಿಯಲ್ಲಿ ಅನೇಕ ಕಡೆಗಳಿಂದ ಆಗಿರುವಂತಹ ವರದಿಯನ್ನು ತಾವು ತರಿಸಿ, ಕನಿಷ್ಠ 100 ಕೋಟಿ ರೂಪಾಯಿಗಳನ್ನು ಆದರೂ ಇವತ್ತೇ ಬಿಡುಗಡೆ ಮಾಡಿ, ಅತಿವೃಷ್ಟಿಯಿಂದ ಯಾವ ಹಳ್ಳಿಗಳಿಗೆ ನೀರು ನುಗ್ಗಿದೆ, ಕೆರೆಕಟ್ಟೆಗಳು ಹಾಳಾಗಿವೆ, ಜಲಾಶಯಗಳಿಗೆ ತೊಂದರೆಯಾಗಿದೆ. ಅಲ್ಲಿ ಅನುಕೂಲ ಮಾಡಿಕೊಡಬೇಕು. ಆದುದರಿಂದ ಇವತ್ತೇ ಹಣವನ್ನು ಬಿಡುಗಡೆ ಮಾಡಿ, ಜಿಲ್ಲಾಧಿಕಾರಿಗಳು ಹಾಗೂ ಸಂಬಂಧಪಟ್ಟಂಥ ಇಲಾಖಾಧಿಕಾರಿಗಳು ತತಕ್ಷಣ ಕೆಲಸವನ್ನು ಮಾಡುವ ಬಗ್ಗೆ ತಾವು ವಿಶೇಷವಾದ ಗಮನವನ್ನು ಕೊಡಬೇಕೆಂದು ಒತ್ತಾಯವನ್ನು ಮಾಡಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

2. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: (ಅ) ಉಪ ಮುಖ್ಯಮಂತ್ರಿಗಳ ಗೈರು ಹಾಜರಿ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಈ ಆಯವ್ಯಯ ಮಂಡನೆ ಆಯಿತು, ಇದು ಮಾಡಿದ್ದು ಮತ್ತು ಬೇಡಿಕೆಗಳು ಎಂದು ಇದು ಎರಡು ಭಾಗಗಳಾಗಿ ನಾವು ಮಾಡಿದ್ದೇವೆ. ಮೊದಲು ಆಯವ್ಯಯದ ಬಗ್ಗೆ ಸಮಗ್ರವಾಗಿ, ವಿಸ್ತಾರವಾಗಿ ಚರ್ಚೆಯಾಯಿತು. ಈಗ ಬೇಡಿಕೆಗಳ ಮೇಲೆ ಚರ್ಚೆ ಮತ್ತು ಮತದಾನ ನಡೆದು ನಂತರ ಆ ಸದನಕ್ಕೆ ಹೋಗಬೇಕಾದದ್ದು. ಇಲ್ಲಿ ಬಹಳ ಪ್ರಮುಖವಾಗಿ ಎದ್ದುಕಾಣುತ್ತಿರುವಂಥಾದ್ದು ಏನೆಂದರೆ ಆಯವ್ಯಯವನ್ನು ಮಂಡಿಸಿದಂತಹ ಉಪ ಮುಖ್ಯಮಂತ್ರಿಗಳಾಗಿರುವಂತಹ ಮಾನ್ಯ ಸಿದ್ದರಾಮಯ್ಯನವರು, ಸದನದಲ್ಲಿ ಇಲ್ಲ. ಇದಕ್ಕೆ ಕಾರಣ ಏನು? ಇದು ಬಹಳ ಪ್ರಾಮುಖ್ಯ, ಏಕೆಂದರೆ ಇವತ್ತು ಅವರು ಸದನದಲ್ಲಿ

ಇರಬೇಕು. ಅದರ ಬಗ್ಗೆ ಮತದಾನವನ್ನು ಪಡೆಯುವುದಕ್ಕೆ ಅವರು ಬಹಳ ಪ್ರಾಮುಖ್ಯವಾಗಿ ಇರಬೇಕು. ಇದಕ್ಕೆ ಕಾರಣ ಏನು? ಇವರು ಏಕೆ ಸದನದಲ್ಲಿ ಇಲ್ಲ? ಇದು ಬಹಳ ಪ್ರಾಮುಖ್ಯವಾದದ್ದು, ನಾವು ಇದನ್ನು ಅಷ್ಟು ಲಘುವಾಗಿ ತೆಗೆದುಕೊಳ್ಳುವಂತಿಲ್ಲ. ಏಕೆಂದರೆ ಇದು ನಮಗೆ ಗೊತ್ತಿದೆ. ಅವರು ಮೂರು ದಿವಸದ ಹಿಂದೆ ಮೊಗಸಾಲೆಗೆ ಬಂದಿದ್ದರು ಮತ್ತು ಖಾಸಗಿ ಕಾರಿನಲ್ಲಿ ಬಂದು, ಈಗಲೂ ಮೊಗಸಾಲೆಯಲ್ಲಿ ಇದ್ದಾರೆಂಬ ಸುದ್ದಿ ಇದೆ. ಕಳೆದ ಮೂರು ನಾಲ್ಕು ದಿವಸಗಳಿಂದ, ಇಲ್ಲಿ ನಾನು ಹೊರಗಡೆಯಿಂದ ಬರುವ ಸುದ್ದಿಗೆ ಹೋಗುವುದಿಲ್ಲ. ಆದರೂ ಏನೋ ಒಂದು ರೀತಿಯಲ್ಲಿ ಭಾರಿ ಗಾಳಿ ಬಿರುಗಾಳಿ, ಗುಡುಗು, ಸಿಡಲು, ಇರುವಂಥಾದ್ದರ ಬಗ್ಗೆ ನಾನು ಅನೇಕ ಸಾರಿ ನಾನು ಹೇಳಿದ್ದೇನೆ. ಇವತ್ತೂ ಕೂಡ ನಾನು ಹೇಳುತ್ತಿದ್ದೇನೆ, ರಾಜಕಾರಣದಲ್ಲಿ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ಉಪ ಮುಖ್ಯಮಂತ್ರಿಗಳಾಗಿ ಅವರು ಇಲ್ಲಿಗೆ ಬರಬೇಕು. ನಾನು ಅವರನ್ನು ಸ್ವಾಗತ ಮಾಡುತ್ತೇನೆ. ಎಲ್ಲೊ ಒಂದು ಕಡೆ ಅವರನ್ನು ತುಳಿಯುವಂತಹ ವ್ಯವಸ್ಥೆ, ಪಿತೂರಿಗಳು ನಡೆಯುತ್ತಿದೆ ಎಂದು ನಾನು ಕೇಳಿದ್ದೇನೆ. ಆದರೆ ಅದು ಏನು ಎಂದು ಆ ವಿಚಾರ ನನಗೆ ಗೊತ್ತಿಲ್ಲ. ಇಲ್ಲಿ ಅವರ ಸ್ನೇಹಿತರಾದ ಮಾನ್ಯ ಎಂ.ಪಿ. ಪ್ರಕಾಶ್‌ರವರು ಇದ್ದಾರೆ, ಮಾನ್ಯ ಪಿ.ಜಿ.ಆರ್. ಸಿಂಧ್ಯರವರು ಇದ್ದಾರೆ. ಅದು ಸರಿಯಲ್ಲ, ಒಳ್ಳೆಯ ರೀತಿಯಲ್ಲ. ಅಲ್ಲಿ ಹುಬ್ಬಳ್ಳಿಯಲ್ಲಿ ನಡೆದಂತಹ ಸಮಾವೇಶಕ್ಕೂ ಅವರನ್ನು ಹೊರಗಡೆ, ಕಳಿಸಿದ್ದಕ್ಕೂ ನಾನು ಆ ರಾಜಕೀಯಕ್ಕೆ ಹೋಗುವುದಿಲ್ಲ. ಆದರೂ ನಾನು ತಮಗೆ ಹೇಳುತ್ತೇನೆ.

ಅಧ್ಯಕ್ಷರು : ಮಾನ್ಯ ಸಿದ್ದರಾಮಯ್ಯನವರು ಸಭೆಗೆ ಬರುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇವರು ಹುಬ್ಬಳ್ಳಿಯಲ್ಲಿ ಸಮಾವೇಶವನ್ನು ಮಾಡಿದ್ದಕ್ಕೂ, ಅವರನ್ನು ಹೊರಗೆ ಹಾಕುವುದಕ್ಕೂ, ಇದನ್ನು ನಾನು ಪತ್ರಿಕೆಗಳಲ್ಲಿ ಓದಿರುವಂಥಾದ್ದು. ಮತ್ತು ಅವರ ವಿರುದ್ಧ ಸಹಿ ಸಂಗ್ರಹ ಮಾಡುವಂಥಾದ್ದು ಇವೆಲ್ಲವೂ ಒಳ್ಳೆಯ ಸೂಚನೆಯಲ್ಲ. ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇವರು ಒಬ್ಬ ಒಳ್ಳೆಯ ವ್ಯಕ್ತಿಯಾಗಿದ್ದಾರೆ.

ಅಧ್ಯಕ್ಷರು : ಎಲ್ಲಾ ತರಹ ಬರುತ್ತದೆ, ನಿಮ್ಮ ಮೇಲೂ ಬಂದಿರಲಿಲ್ಲವೇ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ತಾವು ಮಾನ್ಯ ಸಿದ್ದರಾಮಯ್ಯನವರನ್ನು ಸದನಕ್ಕೆ ಕರೆಸಿ, ಅವರು ಸದನಕ್ಕೆ ಬರಬೇಕು. ಅವರಿಗೆ ಕಾಲುನೋವು ಆಗಿದೆ.

ಶ್ರೀ ಆರ್. ಶ್ರೀನಿವಾಸ್ : ಮಾನ್ಯ ಅಧ್ಯಕ್ಷರೇ, ಇದು ನಮ್ಮ ಪಕ್ಷದ ಆಂತರಿಕ ವಿಚಾರ, ಇದನ್ನು ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡುವಂಥಾದ್ದು ಅಲ್ಲ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೇ, ಇದು ಸದನದ ಸಮಯವನ್ನು ಹಾಳು ಮಾಡುವುದು, ಪ್ರಚಾರಕ್ಕೋಸ್ಕರ ಮಾಡುವುದು. ನಿಜವಾಗಿ ಇವರಿಗೆ ಸಿದ್ದರಾಮಯ್ಯನವರು ಬೇಕಾಗಿಲ್ಲ, ಪ್ರಚಾರ ಮಾತ್ರ ಬೇಕಾಗಿದೆ. ಇಲ್ಲಿ ಸದನದ ಸಮಯ ಹಾಳು ಆಗುತ್ತಿದೆ.

ಶ್ರೀ ಆರ್. ಶ್ರೀನಿವಾಸ್ : ಮಾನ್ಯ ಅಧ್ಯಕ್ಷರೇ, ಇವತ್ತು ರಿಪ್ಲೈ ಇರುವಂಥಾದ್ದು, ಇಲ್ಲಿ ಒಂದು ಪಕ್ಷದ ಆಂತರಿಕ ವಿಷಯವನ್ನು ಇವರು ಮಾತನಾಡುತ್ತಿದ್ದಾರೆ. ಮತ್ತು ಸದನದ ಸಮಯವನ್ನು ಹಾಳು ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಸಿದ್ದರಾಮಯ್ಯನವರ ಬಗ್ಗೆ ಅಪಾರವಾದ ಗೌರವ ಇಟ್ಟುಕೊಂಡಿರುವವನು, ಅವರು ಸಭೆಗೆ ಬರಬೇಕೆಂದು ಹೇಳುವಂಥವನು, ಮಾನ್ಯ ಸಿದ್ದರಾಮಯ್ಯನವರು ಈ ಸದನದಲ್ಲಿ ಆಯವ್ಯಯವನ್ನು ಮಂಡಿಸಿದಂಥವರು. ಈ ಆಯವ್ಯಯವನ್ನು ಮಂಡಿಸಿದಂಥ ಮಾನ್ಯ ಸಿದ್ದರಾಮಯ್ಯನವರು ಈ ಸದನಕ್ಕೆ ಬರಬೇಕೆಂಬುದು ನನ್ನ ಬಯಕೆಯಾಗಿದೆ.

(ಈ ಹಂತದಲ್ಲಿ ಶ್ರೀ ಸಿದ್ದರಾಮಯ್ಯನವರು ಆಗಮಿಸಿದರು)

ಶ್ರೀ ಧರ್ಮಸಿಂಗ್ : ಉತ್ತರ ಇದೇ ಅವರು ಸಭೆಯಲ್ಲಿ ಈಗ ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಾನು ಅದನ್ನು ಸ್ವಾಗತ ಮಾಡುತ್ತೇನೆ. ಮಾನ್ಯ ಸಿದ್ದರಾಮಯ್ಯನವರು ಈ ಸದನಕ್ಕೆ ಬರಬೇಕೆಂಬುದೇ ನಾನು ಕೇಳತಕ್ಕಂಥಾದ್ದು.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿ) : ಮಾನ್ಯ ಅಧ್ಯಕ್ಷರೇ, ನಾನು ಅಸೆಂಬ್ಲಿಯಲ್ಲಿ ಹಾಜರಾಗಿರೋದೇ ನಿಮಗೆ ಉತ್ತರ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಕಳೆದ 3–4 ದಿವಸಗಳಿಂದ ಇದರ ಬಗ್ಗೆ ನಡೆಯುತ್ತಿದ್ದಂಥ....

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ದೊಡ್ಡ ವ್ಯಾಖ್ಯಾನವನ್ನು ಕಟ್ಟಬೇಕಾದಂತಹ ಅಗತ್ಯ ಏನೂ ಇಲ್ಲ. ನನಗೆ Ligament tear ಆಗಿದೆ. I cannot walk. ಆದುದರಿಂದ, ಕಾಲಿನ ಮೇಲೆ ಭಾರ ಬಿಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಟ್ರೀಟ್‌ಮೆಂಟ್ ಏನು ಎಂದರೆ ಟೋಟಲ್ ರೆಸ್ಟ್. ಅದಕ್ಕೋಸ್ಕರವಾಗಿ ನಾನು ರೆಸ್ಟ್ ತೆಗೆದುಕೊಳ್ಳುತ್ತಿದ್ದೇನೆಯ ಹೊರತು ಇದಕ್ಕೆ ಬೇರೆ ಯಾವ ರಾಜಕೀಯದ ಬಣ್ಣವನ್ನು ಕಟ್ಟುವುದಾಗಲಿ, ಬೇರೆ ಇನ್ಯಾವ ರೀತಿಯಲ್ಲಿ ಮಾಡುವುದಾಗಲೀ ಬೇಡ. ನಾನು ಅಧ್ಯಕ್ಷರ ಅನುಮತಿಯನ್ನು ತೆಗೆದುಕೊಂಡು ರೆಸ್ಟ್ ತೆಗೆದುಕೊಳ್ಳುತ್ತಾ ಇದ್ದೆ. ಇದು ಮಾನ್ಯ ಅಧ್ಯಕ್ಷರಿಗೂ ಗೊತ್ತಿದೆ. ಆದರಿಂದ ಇವತ್ತು ನಾನು ಸದನಕ್ಕೆ ಬಂದಿದ್ದೇನೆ. ನನ್ನ ಇಲಾಖೆಗೆ ಸಂಬಂಧಪಟ್ಟಂತಹ ಏನೇನು ಪ್ರಶ್ನೆಗಳು ಇವೆ. ಅವುಗಳನ್ನು ತಾವು ಕೇಳಬಹುದು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸಿದ್ದರಾಮಯ್ಯನವರು ನಮ್ಮ ಹಿತೈಷಿಯಾಗಿ ಮತ್ತು ಸ್ನೇಹಿತರು ಆಗಿದ್ದಾರೆ. ಆ ವಿಚಾರ ಬೇರೆ.

ಅಧ್ಯಕ್ಷರು : ಆಯಿತು. ಈಗ ಮಾನ್ಯ ಸಿದ್ದರಾಮಯ್ಯನವರು ಸದನಕ್ಕೆ ಬಂದರಲ್ಲ, ಬಿಡಿ.

ಶ್ರೀ ಸಿದ್ದರಾಮಯ್ಯ : ಧನ್ಯವಾದಗಳು, ತಾವು ನನ್ನ ಬಗ್ಗೆ ಇಷ್ಟೊಂದು ಕಾಳಜಿಯನ್ನು ವಹಿಸಿದ್ದಿರಲ್ಲಾ, ನಿಮಗೆ ಧನ್ಯವಾದಗಳು.